# <u>ಬ್ರಹ್ಮಾನಂದದ ಸಭೆಯೊಳಗಲ್ಲಿ ಸುಮ್ಮನೆ</u>

1. **Ref.:** Dasara Padagalu – Purandara Dasara Keerthane, Vol 4, Edited by Shri Pavanje Gururao, Sriman Madhwa Siddantha Granthalaya, Udupi, page No. 416.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 441.
3. **Note:** The lyrics are fully matching in both the books. But the wordings used by singer are slightly different and are marked in yellow highlights.

ರಾಗ: ನಾದನಾಮಕ್ರಿಯಾ ತಾಳ: ಏಕ

ಬ್ರಹ್ಮಾನಂದದ ಸಭೆಯೊಳಗಲ್ಲಿ
ಸುಮ್ಮನೆ ಇರುತಿಹುದೇನಯ್ಯ || ಪ ||

ಮೂಡದು (ಮಾಡದು) ಉಣ್ಣದು ಕೂಡದು ಮಾಣದು
ಕಾಡದು ಬೇಡದು ಕಂಗೆಡದು
ನಾಡ ಮಾತುಗಳ ಬಲ್ಲುದು ಆಡದು
ರೂಢಿಯೊಳಿರುತಿಹುದೇನಯ್ಯ || 1 ||

ಪೊಡವಿಗಧಿಕವೆಂಬುವರಿಗೆ ಬಲ್ಲುದು
ಕಡೆಮೊದಲಿಲ್ಲದ ಒಡಲಿಹುದು
ಬೆಡಗನರಿವೆನೆಂಬವರಿಗಗೋಚರ (ಬೆಡಗ ಬಲ್ಲೆನೆಂಬವರಿಗಗೋಚರ)
ಪೊಡವಿಯೊಳಗಣ ಭಕ್ತರ ಬಲ್ಲುದು (ಪೊಡವಿಯೊಳಿರುತಿಹುದೇನಯ್ಯ) || 2 ||

ನಿಲ್ಲದು ನಿಲುಕದು ಎಲ್ಲಿಗೆ ಪೋಗದು
ಬಲ್ಲೆನೆಂಬವರಿಗಳವಡದು
ಬಲ್ಲಿದ ನಮ್ಮ (ನಮ್ಮಯ) ಪುರಂದರ ವಿಠಲ -
ಗಲ್ಲದೆ ತಿಳಿಯದು ಜಗದೊಳಗೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಬ್ರಹ್ಮಾನಂದದ ಸಭೆಯೆಂದರೆ ಮುಕ್ತಿ ಮಂಟಪ, ವೈಕುಂಠ, ಅಲ್ಲಿ ಮುಕ್ತರು ನೆರೆದಿದ್ದು ಪರಮಾತ್ಮನನ್ನು ಸರ್ವದಾ ಓಲೈಸುವರು. ಅವರಿಗೆ ಲಿಂಗದೇಹದ ಭಂಗವಾಗಿರುವುದರಿಂದ ಲೌಕಿಕ ವ್ಯಾಪಾರಗಳೇನೂ ನಡೆಯದು. ಮುಕ್ತಿಯಲ್ಲಿ ಜೀವರುಗಳು ತಮ್ಮ ಸ್ವರೂಪವನ್ನು ಅರಿಯುವರು, ಪರಮಾತ್ಮನ ಸರ್ವಾಧಿಕ್ಯವನ್ನೂ ಅರಿಯುವರು. ಈ ಸ್ಥಿತಿಗೆ ಆದಿಯಾಗಲಿ, ಅಂತ್ಯವಾಗಲಿ, ವಿಕಾರವಾಗಲಿ ಇಲ್ಲ.

**Classification:** Mundige
**Ankita:** purandara vittala
**Location:** NA
**Category:** Bhakti
**Group Words:** brahma, sabhe, kaadu, oota
**Pravachana:** NA
**Explanation:** NA